ಕಂಡು ಹಿಡಿಯಬೇಕಾಗಿದೆ. ಆದ್ದರಿಂದ ನಿಜವಾಗಿಯೂ ರೈತರಿಗೆ ಇದರಿಂದ ಪ್ರಯೋಜನ ಆಗಬೇಕಾದರೆ ನೀವು ಕೆಲವು ಶಾಸಕರ ಸಮಿತಿಯನ್ನು ಮಾಡಿ ತಿಪಟೂರಿಗೆ ಹೋಗಿ ಅಲ್ಲಿ ಇರತಕ್ಕಂಥ ರೈತ ಮುಖಂಡರುಗಳನ್ನು ಭೇಟಿ ಮಾಡಿ ಒಂದು ಸರಿಯಾದಂತಹ ವ್ಯವಸ್ಥೆ ಮಾಡಬೇಕು. ಇವತ್ತು ನಾನು ಹೇಳುತ್ತೇನೆ, ನನಗೆ ಬೇಕು ಎಂದಾಗ ಮೂರು ಸಾವಿರದ ಆರುನೂರು ರೂಪಾಯಿ ಮಾಡುವುದು, ಬೇಡ ಎಂದಾಗ ಎರಡು ಸಾವಿರದ ಇನ್ನೂರು ಮಾಡತಕ್ಕಂಥಾದ್ದು ಏನು ಇದೆ ಅಷ್ಟೊಂದು ಸ್ವಾತಂತ್ರವನ್ನು ವರ್ತಕರಿಗೆ ಕೊಟ್ಟಂಥ ಸಂದರ್ಭದಲ್ಲಿ ಇವತ್ತು ನೀವು ರೈತರಿಗೆ ಸಹಾಯ ಮಾಡಿದ ಹಾಗೆ ಆಗುವುದಿಲ್ಲ.

4.00 ಪಿ.ಎಂ.

ಆದುದರಿಂದ ರೈತ ಮುಖಂಡರನ್ನು ಕೇಳಿ ಇದರ ಬಗ್ಗೆ ಯಾವ ರೀತಿಯಲ್ಲಿ ಕಡಿವಾಣವನ್ನು ಹಾಕಬಹುದೆಂಬುದನ್ನು ಸರ್ಕಾರವರು ಕುಳಿತು ಮಾಡುವುದಕ್ಕೆ ಸಾಧ್ಯವಿದೆ. ಮಾನ್ಯ ಮಂತ್ರಿಗಳು ತಿಪಟೂರಿಗೆ ಬಂದು ಅಲ್ಲಿಯ ಶಾಸಕರ ಜೊತೆ ಕುಳಿತು ವಿಚಾರವಿನಿಮಯ ಮಾಡಿದರೆ ಇದು ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ನೀವು ಈ ಬೆಂಗಳೂರಿನಲ್ಲಿ ಕುಳಿತು ಸಭೆಯನ್ನು ಮಾಡುವುದರಿಂದ ಯಾವುದೇ ರೀತಿಯ ಪ್ರಯೋಜನಾ ಆಗುವುದಿಲ್ಲ. ಆದ್ದರಿಂದ ಅಲ್ಲಿಗೆ ಹೋಗಿ ವಿಚಾರ ವಿನಿಮಯ ಮಾಡುವುದಕ್ಕೆ ತೀರ್ಮಾನವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ: ಪ್ರಥಮವಾಗಿ ವಿಚಾರವನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೆ ಮೊದಲು ಒಂದು ಸಭೆ ನಡೆಯಲಿ. ತಿಪಟೂರಿಗೆ ಅಥವಾ ದೆಹಲಿಗೆ ಹೋಗುವಾಗ ಖಂಡಿತವಾಗಿ ನಾನು ನಿಮ್ಮ ಜೊತೆಯಲ್ಲಿ ಬರುತ್ತೇನೆ.

## ನಿಯಮ 334ರ ಮೇರೆಗೆ

**1. ಬೆಳಗಾವಿ ಜಿಲ್ಲೆಯ ಸಂಕೇಶ್ವರ ಮತ್ತು ಯಮಕನ ಮರಡಿ ಗ್ರಾಮದಲ್ಲಿ ವಿದ್ಯಾರ್ಥಿನಿಲಯ ಕಟ್ಟಲು ಮಂಜೂರಾತಿ.**

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಉಪಾಧ್ಯಕ್ಷರೆ, ಬೆಳಗಾವಿ ಜಿಲ್ಲೆಯ ಸಂಕೇಶ್ವರ ಮತಕ್ಷೇತ್ರದಲ್ಲಿ ಸಂಕೇಶ್ವರ ಪಟ್ಟಣ ವ್ಯಾಪ್ತಿಯಲ್ಲಿ ಸಮಾಜಕಲ್ಯಾಣ ಇಲಾಖೆಯಿಂದ ಸಂಕೇಶ್ವರ ಹಾಗೂ ಯಮಕನಮರಡಿ ಗ್ರಾಮದಲ್ಲಿ ವಿದ್ಯಾರ್ಥಿನಿಲಯ ಕಟ್ಟಲು ಸರ್ಕಾರ ಮಂಜೂರಾತಿ ನೀಡಿದ್ದು ನಿಜವೇ? ಸಂಕೇಶ್ವರದ ರಿವಿಜನ್ ಸರ್ವೆ ನಂ. 350 ಎ ನಲ್ಲಿ ಈ ಬಗ್ಗೆ 1 ಎಕರೆ ಜಮೀನು ಕೊಡುವಲ್ಲಿ ತಡವಾಗುತ್ತಿರುವುದಕ್ಕೆ ಕಾರಣವೇನು? ಹಾಗೂ ಕಟ್ಟಡ ನಿರ್ಮಿಸುವುದನ್ನು ಯಾವಾಗ ಪ್ರಾರಂಭ ಮಾಡಲಾಗುತ್ತದೆ. ಈ ಎಲ್ಲಾ ವಿವರಗಳಿಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಸದನದಲ್ಲಿ ಹೇಳಿಕೆ ನೀಡಲು ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜಕಲ್ಯಾಣ ಹಾಗೂ ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ,

ಬೆಳಗಾವಿ ಜಿಲ್ಲೆ ಸಂಕೇಶ್ವರದಲ್ಲಿ ಒಂದು ಹಿಂದುಳಿದ ವರ್ಗಗಳ ಸರ್ಕಾರಿ ವಿದ್ಯಾರ್ಥಿ ನಿಲಯ ಇದೆ. ಇಲ್ಲಿ 25 ವಿದ್ಯಾರ್ಥಿಗಳಿದ್ದು, ನಿಲಯ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ.

ದಿನಾಂಕ 6.3.1992ರಲ್ಲಿ ಯಮಕನಮರಡಿಗೆ ವಿದ್ಯಾರ್ಥಿ ನಿಲಯವು ಮಂಜೂರಾಗಿದ್ದು, 1992-93ನೇ ಸಾಲಿನಲ್ಲಿ 50 ವಿದ್ಯಾರ್ಥಿಗಳಿಗಾಗಿ ಪ್ರಾರಂಭಿಸಲಾಗಿದೆ. ಈ ನಿಲಯವೂ ಸಹ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ.

ಸಂಕೇಶ್ವರದ ವಿದ್ಯಾರ್ಥಿ ನಿಲಯಕ್ಕಾಗಿ ಸರ್ವೆ ನಂ. 356-ಎ. ನಲ್ಲಿ 20 ಗುಂಟೆ ಜಮೀನನ್ನು ಪಡೆದುಕೊಳ್ಳಲು ಪ್ರಯತ್ನಿಸಲಾಗಿದೆ. ಈ ಜಮೀನಿನಲ್ಲಿ ಅಕ್ರಮ ಸಾಗುವಳಿ ಇದ್ದು, ತೆರವು ಮಾಡಿಸಿ, ಮಂಜೂರು ಮಾಡುವ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಯಮಕನಮರಡಿ ಗ್ರಾಮದಲ್ಲಿ ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ. ಈ ಎರಡೂ ಸ್ಥಳಗಳಲ್ಲಿ ಕಟ್ಟಡಕ್ಕಾಗಿ ಸ್ಥಳ ಒದಗಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಸರ್ಕಾರಿ ಭೂಮಿ ಲಭ್ಯವಿಲ್ಲದಿರುವುದರಿಂದ, ದಾನ ರೂಪದಲ್ಲಿ ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗಳಿಂದ ಪಡೆದುಕೊಳ್ಳುವ ಸಾಧ್ಯತೆಯನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

**2. ಬೆಳ್ತಂಗಡಿ ತಾಲ್ಲೂಕಿನಲ್ಲಿ ಖಾಲಿ ಇರುವ ವೈದ್ಯರ, ದಾದಿಯರ ಹಾಗೂ ಇತರೆ ಹುದ್ದೆಗಳನ್ನು ಭರ್ತಿ ಮಾಡುವುದು**

ಶ್ರೀ ಕೆ. ಗಂಗಾಧರ ಗೌಡ (ಬೆಳ್ತಂಗಡಿ): ಮಾನ್ಯ ಉಪಾಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ ವೈದ್ಯರ, ದಾದಿಯರ ಹಾಗೂ ಇತರ ವೈದ್ಯಕೀಯ ನೌಕರರ ಹುದ್ದೆಗಳು ಖಾಲಿ ಆಗಿದ್ದರೂ ಸರ್ಕಾರ ಇಷ್ಟರವರೆಗೂ ಗಮನವನ್ನು ಕೊಡಲಿಲ್ಲ. ಇದರಿಂದಾಗಿ ಬೆಳ್ತಂಗಡಿಯ ಜನತೆ ತುಂಬಾ ನೊಂದಿದ್ದಾರೆ. ಕೇವಲ ಆಶ್ವಾಸನೆಗಳನ್ನು ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ತುರ್ತಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿರುವ ವೈದ್ಯರ ಮತ್ತು ಆಸ್ಪತ್ರೆಗೆ ಸಂಬಂಧಪಟ್ಟ ಇತರೆ ನೌಕರರ ಹುದ್ದೆಗಳನ್ನು ತುಂಬಬೇಕಾಗಿ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಈ ಬಗ್ಗೆ ಸ್ಪಷ್ಟ ಉತ್ತರವನ್ನು ಬಯಸುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ 10 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಒಂದು ಸರ್ಕಾರಿ ಆರ್ಯುವೇದ ಆಸ್ಪತ್ರೆ ಹಾಗೂ 79 ಉಪ ಕೇಂದ್ರಗಳು ಇರುತ್ತವೆ. ಸದರಿ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಲ್ಲಿ ಮಂಜೂರಾಗಿರುವ ವಿವಿಧ ಹುದ್ದೆಗಳ ವಿವರ ಈ ರೀತಿ ಇರುತ್ತದೆ.

| ಹುದ್ದೆಯ ಹೆಸರು | ಮಂಜೂರಾತಿ | ಕಾರ್ಯನಿರ್ವಹಣೆ | ಖಾಲಿಹುದ್ದೆ |
|---|---|---|---|
| ವೈದ್ಯಾಧಿಕಾರಿ (ಸಹಾಯಕ ಶಸ್ತ್ರ ಚಿಕಿತ್ಸಕರು) | 12 | 7 | 5 (ಒಂದು ಮಹಿಳಾ) |
| ಕ್ಷೇತ್ರ ಆರೋಗ್ಯ ಶಿಕ್ಷಕ | 7 | - | 7 |
| ಫಾರ್ಮಸಿಸ್ಟ್ | 11 | 5 | 6 |
| ಹಿರಿಯ ಆರೋಗ್ಯ ಸಹಾಯಕ | 9 | 4 | 5 |
| ಕಿರಿಯ ಆರೋಗ್ಯ ಸಹಾಯಕ | 22 | 9 | 13 |
| ಹಿರಿಯ ಆರೋಗ್ಯ ಸಹಾಯಕಿ | 10 | 10 | - |
| ಕಿರಿಯ ಆರೋಗ್ಯ ಸಹಾಯಕಿ | 79 | 74 | 5 |
| 'ಡಿ' ಪಂಗಡ | 24 | 18 | 6 |
| ವಾಹನ ಚಾಲಕರು | 2 | 1 | 1 |

ಗ್ರಾಮಾಂತರ ಪ್ರದೇಶಗಳಿಗೆ ಗುತ್ತಿಗೆ ಆಧಾರದ ವೈದ್ಯರನ್ನು ನೇಮಿಸುವ ಕಾರ್ಯ ಪ್ರಗತಿಯಲ್ಲಿದ್ದು, ಈ ನೇಮಕಾತಿಗಳಲ್ಲಿ ಅಲ್ಲದೇ ಸ್ನಾತಕೋತ್ತರ ಶಿಕ್ಷಣ ಮುಗಿಸಿ ಬರುವ ವೈದ್ಯರನ್ನು ನೇಮಿಸುವ ಮೂಲಕ ಖಾಲಿ ಇರುವ ವೈದ್ಯರ ಅದ್ಯತೆ ಮೇಲೆ